ಎಲ್ಲಾ ರೀತಿಯ ತೊಂದರೆ ಅನುಭವಿಸುತ್ತಿದ್ದೇವೆ ಎಂಬ ಅಂಶವನ್ನು ಶೃತಪಡಿಸಿ ಕೊಪ್ಪಳ ತಾಲ್ಲೂಕು ಎಲ್ಲಾ ರೀತಿಯಲ್ಲಿ ಜಿಲ್ಲಾ ಕೇಂದ್ರವಾಗಲಿಕ್ಕೆ ಯೋಗ್ಯ ಪ್ರದೇಶವೆಂದು ವಿಷದಪಡಿಸಿರುತ್ತಾರೆ.

2. ಈ ಸಂಬಂಧ ಕೊಪ್ಪಳದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವುದು ನಿಜವೆಂದು ತಿಳಿದುಬಂದಿರುತ್ತದೆ.

3. ಕೊಪ್ಪಳ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಕೊಪ್ಪಳ ಜಿಲ್ಲಾ ಹೋರಾಟ ಸಮಿತಿಯು ಹೋರಾಟವನ್ನು ನಡೆಸುತ್ತಿದ್ದಾರೆ.

4. ಈ ಹೋರಾಟಗಾರರು ಯಾವ ರೀತಿಯ ಉಗ್ರಕ್ರಮವನ್ನು ಈವರೆಗೂ ತೆಗೆದುಕೊಂಡಿಲ್ಲವೆಂದು ತಿಳಿದುಬಂದಿದೆ. ಇವರು ಜಿಲ್ಲಾಧಿಕಾರಿಯವರಿಗೆ ಜ್ಞಾಪನ ಪತ್ರವನ್ನು ಸಹ ಸಲ್ಲಿಸಿರುತ್ತಾರೆ.

5. ಕೊಪ್ಪಳ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಡಲು ಶ್ರೀ ಗಡ್ಡೀಗೌಡರ ಸಮಿತಿಯು ಶಿಫಾರಸ್ಸು ಮಾಡಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. 1991ರ ಜನಗಣತಿ ಕಾರ್ಯ ಮುಗಿದ ನಂತರ ಈ ವಿಷಯವನ್ನು ಪರಿಶೀಲಿಸಿಲಾಗುವುದು.

19) **ಕೃಷ್ಣರಾಜಪೇಟೆಯಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕಟ್ಟಡದ ಬಗ್ಗೆ.**

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಕೃಷ್ಣರಾಜಪೇಟೆಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಪ್ರಾರಂಭವಾಗಿ ಸುಮಾರು ಇಪ್ಪತ್ತು ವರ್ಷಗಳಾಗಿದೆ. ಆದರೂ ಈ ನ್ಯಾಯಾಲಯ ತನ್ನದೇ ಆದ ಒಂದು ಸ್ವಂತ ಕಟ್ಟಡವನ್ನು ಈವರೆಗೂ ಹೊಂದಿರುವುದಿಲ್ಲ. ನ್ಯಾಯಾಲಯ ಕಾರ್ಯನಿರ್ವಹಿಸುತ್ತಿರುವ ಈ ಜಾಗ ತುಂಬಾ ಗದ್ದಲಗಳಿಂದ ಕೂಡಿದ್ದು, ನೆಮ್ಮದಿಯ ವಾತಾವರಣವನ್ನು ಕಳೆದುಕೊಂಡಿರುತ್ತದೆ. ಕಾರಣ ನ್ಯಾಯಾಲಯಕ್ಕೆ ಹೊಂದಿಕೊಂಡಂತೆಯೇ ಇರುವ ಖಾಲಿ ಜಾಗ, ಖಾಸಗೀ ವಾಹನಗಳ ಆಟೋರಿಕ್ಷಾಗಳ ಮತ್ತು ಪೆಟ್ಟಿ ಅಂಗಡಿಗಳಿಂದ ತುಂಬಿದ್ದು, ವಾಹನಗಳಿಂದ ಹೊರಡುವ ಕರ್ಕಶ ಶಬ್ದ ವಿವಿಧ ಜಾಹಿರಾತುಗಳ ಪ್ರಚಾರ ಅರ್ಭಟ ಸದಾ ತುಂಬಿ ತುಳುಕುವ ಜನಸಂದಣಿಯಿಂದಾಗಿ ಪ್ರಶಾಂತವಾದ ಸ್ಥಳದಲ್ಲಿ ಕಾರ್ಯನಿರ್ವಹಿಸಬೇಕಾಗಿದ್ದ ನ್ಯಾಯಾಲಯ ನೆಮ್ಮದಿಯನ್ನು ಕಳೆದುಕೊಂಡು ತನ್ನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುತ್ತಿದೆ. ಕಟ್ಟಡ ನಿರ್ಮಾಣಕ್ಕಾಗಿ ಸುಮಾರು ಮೂವತ್ತೈದು ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದ್ದು ಪ್ರತಿವರ್ಷವೂ ಸಾಕಷ್ಟು ಹಣ ಬಿಡುಗಡೆಯಾಗದೇ ಅಂದಾಜು ಅಂದಾಜಾಗಿಯೇ ಉಳಿದುಕೊಂಡು ಬರುತ್ತಿದೆ. ಈ ವರ್ಷದ ಆಯವ್ಯಯದಲ್ಲಿಯೂ ಕೂಡ ಸುಮಾರು 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು, ಮೂರನೇ ಒಂದು ಭಾಗಕ್ಕಿಂತ ಒದಗಿಸಿರುವ ಹಣ ಕಡಿಮೆಯಾಗಿದ್ದು, ಆಡಳಿತಾತ್ಮಕ ಮಂಜೂರಾತಿ 1991-92ನೇ ಸಾಲಿನಲ್ಲಿಯೂ ದೊರಕದೇ ನ್ಯಾಯಲಯ ಕಟ್ಟಡ ಕೆಲಸ ಪ್ರಾರಂಭವಾಗುವಂತಿಲ್ಲ. ಆದಕಾರಣ ಮಂತ್ರಿಗಳು ನ್ಯಾಯಾಲಯಕ್ಕೆ ಅತಿ ಅಗತ್ಯವಾಗಿ ಬೇಕಾಗಿರುವ ಕಟ್ಟಡದ ಅವಶ್ಯಕತೆಯನ್ನು ಮನಗಂಡು ಸಾಕಷ್ಟು ಹಣ ಬಿಡುಗಡೆಯಾಗದಿದ್ದರೂ, ಈಗ ಒದಗಿಸಿರುವ ಹಣದಿಂದಲೇ ಕೆಲಸವನ್ನು ಪ್ರಾರಂಭಿಸುವುದಕ್ಕೆ ಅನುಕೂಲವಾಗುವಂತೆ, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವುದರ ಮೂಲಕ ನ್ಯಾಯಾಲಯದ ಕಟ್ಟಡದ ಕೆಲಸ ಪ್ರಾರಂಭಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ನಿವೇದಿಸಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ,

ಶ್ರೀನಿಯಪ್ಪ (ರೇಷ್ಮೆ ರಾಜ್ಯ ಸಚಿವರು) (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ,

1991-92ರ ಆಯವ್ಯಯದಲ್ಲಿ ಕೃಷ್ಣರಾಜಪೇಟೆ ಕೋರ್ಟ್ ಕಟ್ಟಡಕ್ಕೆ ಹತ್ತುಲಕ್ಷ 10,00,000 ರೂಪಾಯಿಗಳನ್ನು ಒದಗಿಸಲಾಗಿದೆ. ಒಟ್ಟು ಅಂದಾಜು ವೆಚ್ಚ 35,70.000 ರೂಪಾಯಿಗಳು, ಆದ್ದರಿಂದ 2,00,000 ಹಣ ಮುಂದಿನ ಆಯವ್ಯಯದಲ್ಲಿ ಕಡಿಮೆ ಇರುವುದರಿಂದ ಲೋಕೋಪಯೋಗಿ ಇಲಾಖೆಯನ್ನು ಬೇರೆ ಕೋರ್ಟ್ ಕಟ್ಟಡಗಳಿಗೆ ಮೀಸಲಾತಿ ಇರುವ ಹಣವನ್ನು ಪರಿವರ್ತಿಸಿ ಆಡಳಿತಾತ್ಮಕ ಮುಂಜೂರಾತಿ ನೀಡಲು ಲೋಕೋಪಯೋಗಿ ಇಲಾಖೆಯನ್ನು ಕೇಳಲಾಗಿದೆ. ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯ ಸಹಮತಿ ಪಡೆದು ಮುಂದಿನ ವರ್ಷ 1991-92ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಪರಿಶೀಲಿಸಲಾಗುವುದು.

(20) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ವೈದ್ಯರುಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಪರಿಸಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡಗಳಿಗೆ ವಿಶೇಷ ನೇಮಕಾತಿ ಯೋಜನೆ ಅನ್ವಯ ಕರ್ನಾಟಕ ಲೋಕಸೇವಾ ಆಯೋಗ, ಭಾರತೀಯ ವೈದ್ಯ ಪದ್ಧತಿ ಹೋಮಿಯೋಪತಿ ಇಲಾಖೆಯಲ್ಲಿ ವೈದ್ಯರು ದರ್ಜೆ-2 (ಆಯುರ್ವೇದ) ಹುದ್ದೆಗಳಿಗೆ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 2 ಆರ್‌ಟಿಬಿ 89 ದಿನಾಂಕ 14ನೇ ಡಿಸೆಂಬರ್ 1989ರಂದು ಅರ್ಜಿ ಕರೆದು 14ನೇ ಮಾರ್ಚ್ 1990ರಲ್ಲಿ ಸಂದರ್ಶನ ನಡೆಸಿ ಒಟ್ಟು ಐದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಸರಿಯಷ್ಟೆ. ಆದರೆ ಆಯ್ಕೆ ಮಾಡಿ ಒಂದು ವರ್ಷವಾದರೂ ಅವರನ್ನು ಇನ್ನೂ ನೇಮಕಾತಿ ಮಾಡಿರುವುದಿಲ್ಲ. ಇದು ಯಾವ ಹಂತದಲ್ಲಿದೆ ಮತ್ತು ಎಷ್ಟು ದಿನದಲ್ಲಿ ನೇಮಕಾತಿ ಮಾಡುತ್ತೀರಿ ಎಂದು ಕೇಳಲು ಇಚ್ಚಿಪಡುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ ತಮ್ಮ ಅನುಮತಿ ಪಡೆದ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಚಿಸುತ್ತೇನೆ.

ಮೀಸಲಾತಿಯಿಂದ ಬಾಕಿ ಉಳಿದಿರುವ 18 ವೈದ್ಯಾಧಿಕಾರಿ, ದರ್ಜೆ - 3 (ಆಯುರ್ವೇದ) ಹುದ್ದೆಗಳನ್ನು ತುಂಬುವ ಸಲುವಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಿ ಕೊಡುವಂತೆ ದಿನಾಂಕ 26-10-1989ರಂದು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿತ್ತು. ಸದರಿ ಆಯೋಗವು ಈ ಕೆಳಕಂಡ 5 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆ ಆಯ್ಕೆ ಪಟ್ಟಿಯನ್ನು ದಿನಾಂಕ 31-3-1990ರಂದು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿತು.

1. ಶ್ರೀಮತಿ ಪುಷ್ಪ ಎ.ಎಸ್.
2. ಶ್ರೀಮತಿ ಆರ್. ಸರಸ್ವತಿ
3 ಶ್ರೀಮತಿ ಜಿ.ಎಸ್. ಶಕುಂತಲಾ
4. ಶ್ರೀ ತಾಂಡವ ಮೂರ್ತಿ
5. ಶ್ರೀ ಸತೀಶ ದುರ್ಗಾ ಭಟ್ಟಲ್

ಮೇಲಿನ ಅಭ್ಯರ್ಥಿಗಳಿಗೆ ನೇಮಕಾತಿ ನೀಡುವ ಮೊದಲು ವೈದ್ಯಕೀಯ ಪರೀಕ್ಷೆ, ಅವರುಗಳ ನಡತೆಯ ಬಗ್ಗೆ ಮತ್ತು ಅವರುಗಳ ಆಯ್ಕೆಯ ಸಮಯದಲ್ಲಿ ನೀಡಿರುವ ಪ್ರಮಾಣ ಪತ್ರಗಳು ಸರಿಯಾಗಿವೆಯೇ ಎಂಬುವುದರ ಬಗ್ಗೆ ಧೃಢೀಕರಿಸಿ ವರದಿಯನ್ನು ಕಳುಹಿಸಿ ಕೊಡುವಂತೆ ನಿರ್ದೇಶಕರು (ವೈ.ಶಿ.) ಬೆಂಗಳೂರು, ಆರಕ್ಷಕ ಮಹಾ ನಿರ್ದೇಶಕರು, ಬೆಂಗಳೂರು ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ದಿನಾಂಕ